529(714) ಶ್ರೀ ಯಡಿಯೂರಪ್ಪ ಬಿ.ಎಸ್. (ಶಿಕಾರಿಪುರ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿ ಅಡಿಕೆ ಬೆಳೆಯುವ ಪ್ರದೇಶಗಳು ಯಾವುವು ಹಾಗೂ ಎಷ್ಟು ಎಕರೆ ಪ್ರದೇಶದಲ್ಲಿ ಅಡಿಕೆ ಬೆಳೆಯಲಾಗುತ್ತಿದೆ.

ಆ) ರಾಜ್ಯದಲ್ಲಿ ಬೆಳೆಯುವ ಒಟ್ಟು ಅಡಿಕೆ ಪ್ರಮಾಣ ಎಷ್ಟು?

ಇ) ಅಡಿಕೆ ಧಾರಣೆ ಕುಸಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ, ಧಾರಣೆ ಕುಸಿಯಲು ಕಾರಣವೇನು?

ಉ) ಅಡಿಕೆಗೆ ಬೆಂಬಲ ಬೆಲೆ ನಿರ್ಧರಿಸಲು ಕಾರ್ಯಪಡೆ ರಚಿಸಲಾಗಿದೆಯೆ? ಕಾರ್ಯಪಡೆಯ ಸದಸ್ಯರು ಯಾರು?

ಊ) ಕಾರ್ಯಪಡೆ ಈವರೆಗೆ ಎಷ್ಟು ಬಾರಿ ಸಭೆ ಸೇರಿದೆ.

ಋ) ಬೆಳೆಗಾರರು ಒಂದು ಕೆ.ಜಿ.ಅಡಿಕೆಗೆ ನೀಡಬೇಕೆಂದು ಆಗ್ರಹಿಸುತ್ತಿರುವ ಹಣ ಎಷ್ಟು?

ಎ) ಸರಕಾರ ಇವರ ಆಗ್ರಹವನ್ನು ಪುರಸ್ಕರಿಸಿದೆಯೇ?

ಶ್ರೀ. ಶ್ರೀನಿವಾಸಗೌಡ (ಕೃಷಿ ಸಚಿವರು) :

ಅ) ಮಲೆನಾಡು, ಕರಾವಳಿ, ಮತ್ತು ಮೈದಾನ ಪ್ರದೇಶದ ಜಿಲ್ಲೆಗಳಲ್ಲಿ ಒಟ್ಟು 1.32 ಲಕ್ಷ ಹೆಕ್ಟೇರ್ ವಿಸ್ತೀರ್ಣದಲ್ಲಿ ಬೆಳೆಯಲಾಗುತ್ತಿದೆ.

ಆ) ಒಟ್ಟು ಉತ್ಪಾದನೆ 1.70 ಲಕ್ಷ ಟನ್‌ಗಳು

ಇ) ಬಂದಿರುತ್ತದೆ

ಈ) ಅಡಿಕೆ ಬೆಳೆ ವಿಸ್ತರಣೆ, ಉತ್ಪಾದನೆಯಲ್ಲಿ ಹೆಚ್ಚಳ, ಉತ್ತರ ಭಾರತದ ಕೆಲವು ರಾಜ್ಯಗಳಲ್ಲಿ ಗುಟ್ಕಾ ನಿಷೇಧಿಸಿ ಬಳಕೆ ಕಡಿಮೆ ಆಗಿರುವುದು ಮತ್ತು ಕಳಪೆ ಗುಣಮಟ್ಟದ ಅಡಿಕೆ ಹೊರ ದೇಶಗಳಿಂದ ಆಮದಾಗುತ್ತಿರುವುದರಿಂದ ಅಡಿಕೆ ಧಾರಣೆ ಕುಸಿಯಲು ಕಾರಣವಾಗಿದೆ ಎಂದು ತಿಳಿದು ಬಂದಿದೆ.

ಉ) ಅಡಿಕೆಗೆ ಬೆಂಬಲ ಬೆಲೆ ಸೇರಿದಂತೆ ಅಡಿಕೆ ಬೆಳೆಗಾರರ ಸಮಸ್ಯೆಗಳನ್ನು ಅಧ್ಯಯನ ಮಾಡಿ ವರದಿ ಮಾಡಲು ಕಾರ್ಯಪಡೆ ರಚಿಸುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಈ ಕಾರ್ಯಪಡೆಯಲ್ಲಿ ತೋಟಗಾರಿಕೆ ಇಲಾಖೆ, ಸಹಕಾರ ಇಲಾಖೆ, ವಾಣಿಜ್ಯ ತೆರಿಗೆ ಇಲಾಖೆ, ಕೃಷಿ ವಿಶ್ವ ವಿದ್ಯಾಲಯ, ಬೆಂಗಳೂರು, ಕ್ಯಾಂಪ್ಕೋ, ಕೆಪೆಕ್ ಸಂಸ್ಥೆ, ವಿಮಾ ಕಂಪನಿಯ ಪ್ರತಿನಿಧಿಗಳು ಮತ್ತು ಪ್ರಾಂತೀಯ ಅಡಿಕೆ ಬೆಳೆಗಾರರು ಸದಸ್ಯರಾಗಿರಲು ಪ್ರಸ್ತಾಪಿಸಲಾಗಿದೆ.

ಊ) ಕಾರ್ಯಪಡೆ ರಚನೆಯ ಹಂತದಲ್ಲಿ ಇರುವುದರಿಂದ ಸಭೆಗಳು ನಡೆದಿರುವುದಿಲ್ಲ.

ಋ) ಪ್ರತಿ ಕೆ.ಜಿ. ಚಾಲಿ ಅಡಿಕೆಗೆ ರೂ. 80–00 ಮತ್ತು ಪ್ರತಿ ಕೆ.ಜಿ. ಕೆಂಪು ಅಡಿಕೆಗೆ ರೂ. 100–00 ರಂತೆ ನೀಡಬೇಕೆಂದು ಅಡಿಕೆ ಬೆಳೆಗಾರರು ಕೋರಿರುತ್ತಾರೆ.

ಎ) ಸರ್ಕಾರವು 2002ರಲ್ಲಿ ಪ್ರತಿ ಕೆ.ಜಿ.ಚಾಲಿ ಅಡಿಕೆಗೆ ರೂ.60–00 ಮತ್ತು ಪ್ರತಿ ಕೆ.ಜಿ.ಕೆಂಪು ಅಡಿಕೆಗೆ ಈಗ ರೂ.85–00ರಂತೆ ಬೆಂಬಲ ಬೆಲೆ ನಿಗಧಿಪಡಿಸಿದೆ.